

ಸಂದರ್ಶನ: ಬೆಳಚಿಕ್ಕನಹಳ್ಳಿ ಶ್ರೀನಾಥ್

# ‘ಸಂಸ್ಕೃತಿಯ ಜಗತ್ತು ಇಲ್ಲದಿದ್ದರೆ ಮನುಷ್ಯ ಬದುಕುವುದೇ ಕಷ್ಟ...

## ಸಂಶೋಧಕ, ಕವಿ ಲಕ್ಷ್ಮೀಪತಿ ಕೋಲಾರ ಸಂದರ್ಶನ

ಲಕ್ಷ್ಮೀಪತಿ ಕೋಲಾರ ಕನ್ನಡದ ಅಪರೂಪದ ಕವಿ, ದೇಸಿ ಸಂಶೋಧಕ, ಸಂಸ್ಕೃತಿ ಚಿಂತಕ. ಸಾಹಿತ್ಯ, ಚಳವಳಿ, ಪತ್ರಿಕೋದ್ಯಮ, ರಂಗಭೂಮಿ, ಸಿನಿಮಾ – ಹೀಗೆ ಲಕ್ಷ್ಮೀಪತಿಯವರ ಕ್ರಿಯಾಶೀಲತೆ, ಹುಡುಕಾಟ, ಅಭಿವ್ಯಕ್ತಿಗಳಿಗೆ ಹಲವು ಮುಖ. ಕಾವ್ಯಸೃಷ್ಟಿ ಅವರ ನೆಚ್ಚಿನ ಕಾಯಕವಾದರೆ, ಚರಿತ್ರೆಯ ಹಾದಿಯಲ್ಲಿ ಅಂಚಿಗೆ ಸರಿಸಲ್ಪಟ್ಟ ನಮ್ಮ ನೆಲದ ಸಾಂಸ್ಕೃತಿಕ ಹಾಗೂ ಧಾರ್ಮಿಕ ಸತ್ಯಗಳ ಶೋಧನೆ ಅವರ ಮುಖ್ಯ ಕಾಳಜಿ. ಬಯಲು ಸೀಮೆಯ ಬದುಕು, ಬಂಡೆ–ಬೆಟ್ಟಗಳಿಂದ ಸ್ಫೂರ್ತಗೊಂಡ ಲಕ್ಷ್ಮೀಪತಿ, ಕಠಿಣ ಸಂದರ್ಭಗಳಲ್ಲೂ ತಮ್ಮ ಸೈದ್ಧಾಂತಿಕತೆ, ಹೋರಾಟದ ಮನೋಭಾವಗಳನ್ನು ಬಿಡಲೊಪ್ಪದವರು. ಅವರು ತಮ್ಮ ಬದುಕಿನ ತತ್ವಪ್ರಣಾಳಿಕೆ, ಕಾವ್ಯಧೋರಣೆ, ಹೋರಾಟದ ಹಾದಿಯ ಬಗ್ಗೆ ‘ಮಯೂರ’ದ ಜೊತೆ ಹಂಚಿಕೊಂಡಿದ್ದು ಇಲ್ಲಿದೆ.